# ಕುವೆಂಪು ಅವರ ಸಮುದ್ರ ಲಂಘನ : ಮಹಾಕಾವ್ಯದ ಪೂರ್ವ ಪ್ರಯೋಗ

***ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.**

**ಪ್ರವೇಶ**

ಸಮುದ್ರಲಂಘನ ಕುವೆಂಪುರವರ ಕಾವ್ಯಜೀವನ ವಿಕಾಸದ ನಸುಬೆಳಕಿನ ಕಾಲಘಟ್ಟದ ಒಂದು ಪ್ರಯೋಗಶೀಲ ಕೃತಿ. ಕವಿಯ ಭಾವಸತ್ಯ ಲೋಕಸತ್ಯದ ಕಡೆಗೆ ಮುಖಮಾಡುತಿರುವುದರ ಹವಣಿಕೆ ಈ ಕಾವ್ಯದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಹೀಗೆ ಹೇಳುವುದಕ್ಕೆ ಕಾರಣವಿದೆ ಕವಿ ಕುವೆಂಪು ಆ ಹೊತ್ತಿಗಾಗಲೆ ಅನೇಕ ಭಾವಗೀತೆಗಳನ್ನು ರಚಿಸಿದ್ದರು. ಅಲ್ಲಿ ಕವಿಯ ಮನಸ್ಸಿನ ಉಜ್ವಲಭಾವಗಳು ರುಸ್ವವಾಗಿ ಮಿಂಚಾಡುತ್ತಿದ್ದವು. ಆದರೆ ಅದೇ ಮಹಾದರ್ಶನ, ಸಮುದ್ರಲಂಘನದಂತಹ ದೀರ್ಘಸ್ವರೂಪದ ಕಾವ್ಯಗಳಲ್ಲಿ ವೈಯಕ್ತಿಕವಾದ ರುಸ್ವಭಾವಗಳಿಗೆ ವಸ್ತುಪ್ರಧಾನವಾದ ಖಂಡಕಾವ್ಯಗಳಲ್ಲಿ ಎಡೆ ಕಡಿಮೆ. ಹೀಗಾಗಿ ಕವಿಯ ಅಭಿವ್ಯಕ್ತಿ ವಸ್ತು ಪ್ರಧಾನವಾದ ಲೋಕ ಸತ್ಯವನ್ನು ಅಪ್ಪಿಕೊಂಡಿತು ಎಂಬುದೆ ನಮ್ಮ ಮೇಲಿನ ಮಾತಿಗೆ ನಾವು ನೀಡಿರುವ ಸ್ಪಷ್ಟನೆ. ಶ್ರೀಮಾನ್ ಕುವೆಂಪುರವರು ತಾವು ಸಮುದ್ರ ಲಂಘನ ಎಂಬ ಕಿರುಕಾವ್ಯವನ್ನು ರಚಿಸಿದ್ದು ಅದು ಅರ್ಥಸಾಧಕ ಪತ್ರಿಕೆಯಲ್ಲಿ ಪ್ರಕಟಗೊಂಡಿತು ಅದೇನಾದರು ದೊರತರೆ **"ಶ್ರೀರಾಮಾಯಣ ದರ್ಶನಂ"** ಮಹಾಕಾವ್ಯರಚನೆಯ ಹಿಂದಿನ ಕೆಲವು ಸಂಗತಿಗಳು ತಿಳಿದು ಬರುತ್ತವೆ. ಎಂದು ಆಗಾಗ ಹೇಳುತ್ತಿದ್ದರೆಂದು ದೆ.ಜೆ.ಗೌ ಉಲ್ಲೇಖಿಸುತ್ತಾರೆ. ಸಮುದ್ರ ಲಂಘನ ರೂಪತಹ ಒಂದು ಖಂಡಕಾವ್ಯ. ಇದರ ವಸ್ತು ವಾಲ್ಮೀಕಿಕೃತ ಶ್ರೀಮದ್‌ರಾಮಾಯಣದ ಸಮುದ್ರ ಲಂಘನ ಪ್ರಸಂಗದಿಂದ ನೇರವಾಗಿ ಸ್ವೀಕರಿಸಿದ್ದು. ರಾವಣ ಸೀತೆಯನ್ನು ಅಪಹರಿಸಿ ಲಂಕೆಗೆ ಕೊಂಡೊಯ್ದು ಸೆರೆಯಲ್ಲಿಡುವುದು: ಅವಳ ಇರುವನ್ನು ವಾನರನಾದ ಆಂಜನೇಯ ಸಮುದ್ರ ಲಂಘನ ಮಾಡಿ ಲಂಕೆಯಲ್ಲಿರುವ ಸೀತೆಯನ್ನು ಸಂದರ್ಶಿಸುವುದು ಬಹಳ ಪ್ರಸಿದ್ಧವಾದ ಕಥೆ. ಜನಮಾನಸದ ಈ ಕಥೆಯನ್ನು ಮೂಲ ರಾಮಾಯಣದಲ್ಲಿ ಮಹೋಜ್ವಲವಾಗಿ ನಿರೂಪಿಸಿರುವಂತೆ ಕವಿ ಕುವೆಂಪು ಕನ್ನಡದ ಮಾತಿನಲ್ಲಿ ಮರುಹುಟ್ಟು ಕೊಟ್ಟಿದ್ದಾರೆ. ಇದರರ್ಥ ಸಮುದ್ರ ಲಂಘನ ಮೂಲ ರಾಮಾಯಣದ ತದ್ವತ್ ಅನುಸರಣೆಯಲ್ಲ. ಇಲ್ಲಿ ಹೊಸ ಭಾವ ಹೊಸಬಣ್ಣ ನವೀನ ಮಾದರಿಯ ವರ್ಣನಾ ಚಮತ್ಕಾರದಿಂದ ಈ ಪ್ರಸಂಗ ಹೊಸಹುಟ್ಟು ಪಡೆದಿದೆ. ಸೀತೆಯ ಅಪಹರಣದ ನಂತರ ಶ್ರೀರಾಮ ಅವಳಿರುವ ತಾವನ್ನು ಅರಿಸಲು ವಾಲಿ – ಸುಗ್ರೀವವರಿಗೆ ಆಜ್ಞಾಪಿಸುತ್ತಾನೆ. ಆ ಪ್ರಕಾರ ಸುಗ್ರೀವರ ವಾನರಪಡೆ ಅಂಗದನ ಸಾರಥ್ಯದಲ್ಲಿ ಇಡೀ ಧರಣಿಮಂಡಲವನ್ನೆಲ್ಲ ಸುತ್ತಿ ಜಾನಕಿಯ ಸುಳಿವು ಕಾಣದೆ ಬಸವಳಿದು ಬೆಂಡಾಗಿ ನಿರಾಶೆಯ ಭಾವದಲ್ಲಿ ಇರಲು ತಾವು ಇನ್ನು ಮುಂದೆ ಕೈಗೊಳ್ಳಬೇಕಾದ ಕ್ರಮವನ್ನು ಕುರಿತು ವಾನರ ಪಡೆಯಲ್ಲಿ ನಡೆಸುವ ಮಂತ್ರಾಲೋಚನೆ ಈ ಕಾವ್ಯದ ವಸ್ತು. ಮುಂದೆ ವೀರ ಹನುಮನನ್ನು ಸಮುದ್ರ ಲಂಘನಕ್ಕೆ ಉಜ್ಜುಗಿಸುವುದು, ಅವನಿಂದ ಆ ಪವಿತ್ರಕಾರ್ಯ ಸಿದ್ಧಿಯಾಗುವುದು ಇದರ ವಸ್ತು. ತತಾಕಥಿತವಾದರು ಅದನ್ನು ನಿರೂಪಿಸುವುದರಲ್ಲಿ ಕವಿ ತೋರಿರುವ ಕಲ್ಪನಾ ಶಕ್ತಿ ಕಾವ್ಯ ಪ್ರೌಢಿಮೆ ಮತ್ತು ರಸ ದೃಷ್ಟಿಗಳು ನವೊನವವಾಗಿ ಮೂಡಿ ಬಂದಿದೆ.

ಮೂಲ ಕಾವ್ಯದ ಆವರಣವು ಇಲ್ಲಿ ಸಹ್ಯಾದ್ರಿ ಶೃಂಗಕ್ಕೆ ಸ್ಥಾನಾಂತರಗೊಂಡಿದ್ದು. ಕವಿಯ ಅನುಭವ ಪ್ರಮಾಣ್ಯತೆ ಕಾವ್ಯದ ಒಟ್ಟು ಮೆರಗನ್ನು ಹೆಚ್ಚಿಸಿದೆ. ಈ ಕಾವ್ಯದ ಘಟನೆಗಳು ಮತ್ತು ಕ್ರಿಯಾವಳಿಗಳಿಗೆ ಸಹ್ಯಾದ್ರಿ ಶೃಂಗವೆ ವೇದಿಕೆಯಾಗುತ್ತದೆ. ವಾನರ ಪಡೆಯ ಮಂತ್ರಾಲೋಚನೆ ಜರುಗುವುದು ಇದೆ ಜಾಗದಲ್ಲಿ. ಮುಗಿಲು ಮುಟ್ಟುವ ಬೆಟ್ಟದ ತುತ್ತತುದಿಯಲ್ಲಿ ವಾನರಪಡೆಯ ಸೈನಿಕರೆಲ್ಲ ನೆರೆಯುತ್ತಾರೆ. ಸೀತೆಯ ಇರುವಿನ ಸ್ಥಳವನ್ನು ಪತ್ತೆ ಹಚ್ಚುವಲ್ಲಿ ವಿಫಲರಾಗಿದ್ದಾರೆ. ಒಡೆಯನು ಕೊಟ್ಟ ಅವಧಿಯು ಮೀರಿದೆ. ಹೀಗೆ ಇರುವುದರಿಂದ ಅವರಲ್ಲಿ ನಿರಾಶೆ ಮನೆಮಾಡಿದೆ. ವಾನರ ಪಡೆಯ ಹಿರಿಯರೆಲ್ಲ ಚಿಂತಾಕ್ರಾಂತರಾಗಿದ್ದಾರೆ. ಅವರನ್ನೆಲ್ಲ ಮಂತ್ರಾಲೋಚನೆಗೆಂದು ದಳಪತಿಯಾದ ಅಂಗದ ಒಂದೆಡೆಗೆ ಸೇರಿಸುತ್ತಾನೆ. ಆಗ ಮಾತನಾಡುವ ಜಾಂಬವಂತ ಸೀತೆಯನ್ನು ಅರಸಿದರೆ ಯುಗಯುಗಾಂತರದವರೆಗೆ ತಮ್ಮ ಕೀರ್ತಿ ನೆಲೆಗೊಳ್ಳುವುದು. ಸೋಲಾದರೆ ಕರ್ತವ್ಯವೆಸಗುತ್ತಲೆ ಮಡಿಯುವುದು ಎಂದು ಉದ್ಗರಿಸುತ್ತಾನೆ . ಮಹಾಕವಿ ಕುವೆಂಪುರವರ ಕಾವ್ಯ ಪ್ರತಿಭೆ ಆಗಿನ್ನು ಕೊನರೊಡೆಯುತ್ತಿದ್ದ ಕಾಲದ ಒಂದು ವಿಶಿಷ್ಟ ರಚನೆ ಸಮುದ್ರ ಲಂಘನ. ೧೯೩೦ರ ಅಸುಪಾಸಿನಲ್ಲಿ, 'ಅರ್ಥಸಾಧಕ' ಪತ್ರಿಕೆಯಲ್ಲಿ ಮೊಟ್ಟಮೊದಲಬಾರಿಗೆ ಪ್ರಕಟವಾಯಿತು. ರುಸ್ವಭಾವಗಳನ್ನು ಭಾವಗೀತದ ಮೂಲಕ ಶಬ್ಧ ಮಾಧ್ಯಮದಲ್ಲಿ ಅಭಿವ್ಯಕ್ತಿಸಲು ಆರಂಭಿಸಿದ ಕವಿಯ ಮನಸ್ಸು ಧೀರ್ಘಕಾವ್ಯಗಳತ್ತ ಒಲಿಯಿತು. ತತ್‌ಪರಿಣಾಮವಾಗಿ ೧೯೨೮ರಲ್ಲಿ ಮಹಾದರ್ಶನ, ೧೯೩೦ರಲ್ಲಿ ಸಮುದ್ರ ಲಂಘನ, ೧೯೩೬ ರಲ್ಲಿ

'ಚಿತ್ರಾಂಗದ' ದಂತಹ ಖಂಡಕಾವ್ಯಗಳು ಕುವೆಂಪು ಅವರಿಂದ ಬರೆಯಲ್ಪಟ್ಟವು. ಇವು ಮುಂದೆ ಕುವೆಂಪುರವರಿಗೆ ಮಹಾಕಾವ್ಯರಚನೆಗೆ ಬೇಕಾದ ಭೂಮಿಕೆಯನ್ನು ಸಿದ್ಧಪಡಿಸಿದವು ಎನ್ನಬಹುದು.

ಹಿರಿಯ ಜಾಂಬವನ ಮಾತುಗಳಿಂದ ಉತ್ತಸ್ಫೂರ್ತನಾದ ಹನುಮಂತ, ದೇವಿ ಸೀತೆಯನ್ನು ಅರಸುವುದೆ ನಮಗೆ ಇಗ ಉಳಿದಿರುವ ದಾರಿ. ಇದಕ್ಕೆ ಮಾರುತಿಯೆ ಹೊಣೆ ಎಂದು ಉದ್ಘರಿಸುತ್ತಾನೆ. ಅಷ್ಟರಲ್ಲಿ ಸಂಪಾತಿಯು ಬಾನಿಂದ ಕೆಳಗೆ ಇಳಿದು ವಾನರಪಡೆಯಿದ್ದ ಸ್ಥಳಕ್ಕೆ ಧಾವಿಸಿ ಲಂಕೆಯಿರುವ ದಿಕ್ಕನ್ನು ತೋರಿಸುತ್ತಾನೆ. ಅದು ತಿಳಿದೊಡನೆ ಇಡೀ ಕಪಿ ಸಮೂಹ ಹರ್ಷಗೊಳ್ಳುತ್ತದೆ. ಆದರೆ ೧೦೦ ಯೋಜನ ದೂರವನ್ನು ಕ್ರಮಿಸುವುದು ಹೇಗೆ ಆ ಕಾರ್ಯ ಯಾರಿಂದ ಸಾಧ್ಯವಾಗುತ್ತದೆ ಎಂಬ ಬಗ್ಗೆ ಚಿಂತನ ಮಂಥನ ನಡೆಯುತ್ತದೆ. ಗವಯ ೭೦ ಯೋಜನ ಕ್ರಮಿಸುವುದಾಗಿ ಹೇಳುತ್ತಾನೆ. ಮುದಿಯ ಜಾಂಬವ ೯೦ಯೋಜನ ಕ್ರಮಿಸುವ ಶಕ್ತಿ ತನಗೆ ಇದೆ ಎನ್ನುತ್ತಾನೆ. ಅಂಗದನಿಗಾದರು ೧೦೦ ಯೋಜನ ಕ್ರಮಿಸುವ ಶಕ್ತಿ ಇದ್ದರು, ಹಿಮ್ಮರುಳುವ ಸಾಮರ್ಥ್ಯವಿಲ್ಲ. ಹೀಗಿರಲು ಹಿರಿಯನಾದ ಜಾಂಬವನು, ವೀರ ಹನುಮನೆಡೆಗೆ ಕಣ್ಣಾಗಿ ಈ ಮಹತ್ಕಾರ್ಯಕ್ಕಾಗಿ ಅವನನ್ನು ಪ್ರಚೋದಿಸುತ್ತಾನೆ. ಅವನ ಯೋಗ ಸಿದ್ಧಿಯ ಹಿರಿಮೆಯನ್ನು ಮನವರಿಕೆ ಮಾಡಿಕೊಡುತ್ತಾನೆ. ಆಗ ಹನುಮಂತ ಸಮುದ್ರಲಂಘನಕ್ಕೆ ಸನ್ನದ್ಧನಾಗುತ್ತಾನೆ. ಕಪಿ ವೀರರಿಂದ ಸನ್ಮಾನವನ್ನು ಶುಭ ಹಾರೈಕೆಯನ್ನು ಪಡೆದು ಆಕಾಶದತ್ತ ನೆಗೆದು ಮೊಡಗಳಲ್ಲಿ ಕಣ್ಮರೆಯಾಗುತ್ತಾನೆ.

ಒಂದು ಸಂಜೆ ಮಹಿಂದ್ರಾಚಲದಲ್ಲಿ ವಿಶ್ರಾಂತಿ ಪಡೆದು ಗಗನಗಾಮಿಯಾಗಿ ಮುಂಬರಿಯುತ್ತಾನೆ. ಅಲ್ಲಿ ನಿಶಾಚರಿಯಾದ ಸಿಂಹಿಕೆಯು ಒಡ್ಡಿದ ತೊಡರುಗಳನ್ನು ಎದುರಿಸಿ ಅಣುವಿನ ಆಕಾರದಲ್ಲಿ ಅವಳ ಗರ್ಭದೊಳಗೆ ಹೊಕ್ಕು ಬೃಹದಾಕಾರದಲ್ಲಿ ಬೆಳೆದು ಅವಳ ಕರುಳನ್ನು ಸೀಳಿ ವಾಯುವೇಗದಲ್ಲಿ ಮುನ್ನಡೆದು ಹೇಮಕಳಶಗಳಿಂದ ಕಂಗೋಳಿಸುತ್ತಿದ್ದ ಲಂಕೆಯ ಅರಮನೆಯನ್ನು ದೂರದಿಂದಲೆ ಗುರುತ್ತಿಸುತ್ತಾನೆ. ಇದಿಷ್ಟು ಈ ಕಾವ್ಯದ ಕಥಾನುಪೂರ್ವಿ. ಈ ಕಾವ್ಯದ ವೈಶಿಷ್ಟವಿರುವುದು ಕಥೆಯನ್ನು ಸರಳರೇಖಾತ್ಮಕವಾಗಿ ಮಂಡಿಸುವುದರಲ್ಲಿ ಅಲ್ಲ, ಬದಲಾಗಿ ಸವೇಗವಾದ ವರ್ಣನೆಗಳಲ್ಲಿ ಉಪಮಾ ರೂಪಕಗಳಲ್ಲಿ ಅಪೂರ್ವ ಸೊಗಸಿನಿಂದ ಕೂಡಿದ ಲೋಕೋಕ್ತಿಗಳನ್ನು ಹದನಾಗಿ ಸಂಯೋಜಿಸಿ ಕಥೆಯನ್ನು ಸಂಭಾಷಣೆಗೆ ಅಳವಡಿಸಿರುವುದು ಇಲ್ಲಿನ ಹೆಗ್ಗಳಿಕೆ ಆಗಿದೆ.

ಸಂಭಾಷಣೆಯೆ ಈ ಕಾವ್ಯದ ಜೀವಾಳ. ಅದು ಕಥೆಯ ಸಮಸ್ತ ಕ್ರಿಯೆಗಳಿಗು, ಘಟನೆಗಳಿಗು ವಾಹಕವಾಗಿದೆ. ವಾನರ ವೀರರ ನಡುವೆ ನಡೆಯುವ ಸಂಭಾಷಣೆಗಳು ಅವರ ಸ್ವಭಾವವನ್ನು; ರಾಮ ಸೀತೆಯರ ಬಗೆಗಿನ ಅವರ ನಿರ್ಮಮವಾದ ಪ್ರೇಮವನ್ನು ಧ್ವನಿಸುತ್ತದೆ. ಅಂಗದ, ಜಾಂಬವ, ಗವಯ, ಶರಭ, ಹನುಮಂತ ಇವರ ನಡುವಿನ ಸಂಭಾಷಣೆಯ ಒಂದೆರಡು ತುಣುಕುಗಳನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ. ಸಂಪಾತಿ ರಾವಣನಿರುವ ಲಂಕೆ ಮಹೇಂದ್ರ ಗಿರಿಯಿಂದ ಮುಂದೆ ಇರುವ ಕಡಲಿನಾಚೆಯ ದಕ್ಷಿಣ ದಿಕ್ತಟದಲ್ಲಿದ್ದು ೧೦೦ ಯೋಜನ ದೂರದಲ್ಲಿ ಇರುವುದನ್ನು ಅರಹುತ್ತಾನೆ. ಅದನ್ನು ಕೇಳಿದ ಅಂಗದನು ಸಮುದ್ರ ಲಂಘನಕ್ಕಾಗಿ ಗವಯನನ್ನು ಪ್ರಚೋದಿಸುತ್ತಾನೆ.

**"ಕೇಳಿ ಬಲ್ಲೆನು, ಗವಯ, ನೀನು ಮಹಾ ಪರಾಕ್ರಮಶಾಲಿಯೆಂಬುದ–**

**ನಳುಕುವರೆ ಸಂಧಿಸಿದ ಕೀರ್ತಿಯ ಹೊರೆಯ ಹೊರುವುದಕೆ?**

**ಭಕ್ತನಿಗೆ ಜಗದೀಶನೊಲ್ಮೆಯು ಭಾರವೇ? ಮುಕ್ತನಿಗೆ ಬಂಧವೆ**

**ಮಾಯೆಯೆಂಬುವ ಲೀಲೆ? ಸಾಹಸ ಹೊರೆಯ ಶಕ್ತನಿಗೆ?**

**ಹೊರೆಯೆ ಬಣ್ಣವು ಮೆರೆವ ಹೂವಿಗೆ? ಕಂಪು ಮಲಯಜಕೇನು ಭಾರವೆ?**

**ಸಮರಲೋಲಗೆ ಮೈದೊಡವು ಮೇಣ್ಸರಸ ಸಾಹಸವು!**

**ನೂರುಯೋಜನವೇನಸಾಧ್ಯವೆ? ಮುನ್ನೀರನುತ್ತರಿಸಿ, ದೇವಿಯ**

**ಕಂಡು, ಸುದ್ದಿಯ ತರುವಿಯೋ? ನುಡಿ! ಕೊಡುವೆ ವೀಳೆಯವ!"೨**

ಇದಕ್ಕೆ ಪ್ರತಿಯಾಗಿ ವಿನಯಶೀಲನಾದ ಗವಯ ಆಡುವ ಮಾತುಗಳು ಅಷ್ಟೆ ಔಚಿತ್ಯ ಪೂರ್ಣವಾಗಿವೆ. ಅವು ಗವಯನಿಗೆ ತನ್ನ ಸಾಮರ್ಥ್ಯದ ಬಗ್ಗೆ ಇರುವ ಸ್ಪಷ ಅರಿವನ್ನು, ಆ ಪವಿತ್ರ ಕಾರ್ಯದ ಗಂಭೀರತೆಯನ್ನು ಗ್ರಹಿಸುವ ಅವನ ಸ್ಥಿತ ಪ್ರಜ್ಞೆಯನ್ನು ಸಾಧರಪಡಿಸುತ್ತವೆ.

**"$$$ಗವಯನೆಂದನು ಕೈ ಮುಗಿದು ವಿನಯದಲಿ "ಮನ್ನಿಸು,**

**ಜೀಯ, ಬಿನ್ನಹವಿಹುದು; ಲಾಲಿಸು; ಜನಕಜಾತೆಯನು**

**ಕಂಡು, ಸಿರಿಯಡಿಗೆರಗಿ ಸುದ್ದಿಯ ತಂದು, ರಾಮನ ಕೃಪೆಯ ಹೊಂದುವು–**

**ದೆನಗಿರಲಿ! ಸುಗೀವನೊಲ್ಲೆಯ ಸೂರೆಯೆನಗಿರಲಿ!**

**ಕೀರ್ತಿಕಾಂತೆಯನೋತು ಹೊಂದುವ ಸೌಭಾಗ್ಯದಾನಂದವೆನಗಿರ–**

**ಲಿರಲಿ ಆ ಮುನ್ನೀರ ನೆಗೆಯುವ ಪರಮ ಸಾಹಸವು!**

**ಮತಿವಂತರಾದವರು, ತಮ್ಮಳಲಳತೆಯನು ಮೀರಿರುವ ಸಾಹಸ–**

**ಕುಜ್ಜುಗಿಸಿ, ಕೈಕೊಂಡು, ಕೆಡಿಸರು ರಾಜಕಾರಿಯವ;**

**ನೂರುಯೋಜನದಳತೆಯನು ಲಂಘಿಸುವ ನೆಚ್ಚಿಲ್ಲವೆನಗದರೊಳ–**

**ಗೆಪ್ಪತ್ತು ಯೋಜನವ ನೆಗೆಯುವೆ! ಮುಂದೆ ದೈವ ಕೃಪೆ!**

**ಮೇಲೆ ಹಾರುವ ವೀರರಿದ್ದರೆ ಬರಲಿ ಮುಂದಕೆ, ಬಾರದಿರೆ ನಾ–**

**ನೀ ಮಹಾ ಸಾಹಸವ ಕೈಕೊಂಡೆಸಗಲೆಳಸುವೆನು!"[೩]**

ಇಲ್ಲಿನ ಇನ್ನೊಂದು ಪ್ರಧಾನ ಗುಣವೆಂದರೆ ಕಥೆಯನ್ನು ಅಡಕವಾಗಿ ನಿರೂಪಿಸುವ ಕ್ರಮ ಈ ಅಡಕತೆ ಸಂಕ್ಷಿಪ್ತತೆ ಖಂಡಕಾವ್ಯದ ಪ್ರಧಾನ ಲಕ್ಷಣವು ಹೌದು. ಮಹಾಕಾವ್ಯ ರಚನೆಯ ಮುಂಚಿನ ತಾಲೀಮು ಹೌದು. ಕಪಿ ವೀರರಲ್ಲಿ ಒಬ್ಬನಾದ ಶಬರ ಆಡುವ ಮಾತುಗಳನ್ನು ಇಲ್ಲಿ ಗಮನಿಸೋಣ.

**"ಜೀಯ, ನಾನೆಂಭತ್ತು ನೆಗೆಯುವೆ! ಮುಂದೆ ಬಿದಿಯ ಬಲ!**

**ಹಿಂದೆ ನಾನೊಂದು ದಿನ ಗೆಳೆಯರ ಕೂಡಿ ಲೀಲೆಗೆ ನೂರು ಯೋಜನ**

**ದಾಚೆ ನೆಗೆದೆನು; ಬಂದು ತಾಗಿದೆನೊಂದು ಹುತ್ತವನು!**

**ಮೇಣೊಡೆದುದಾ ಹುತ್ತವದರೊಳು ತಪಸಿಯೊಬ್ಬನ ಕಂಡೆನಾ ಮುನಿ**

**ಮುನಿದು ಶಪಿಸಿದನೆನ್ನ ಬಲವಳಿವಂತೆಯದರಿಂದ**

**ನೂರು ಯೋಜನದಳತೆಯನು ನಾ ನೆಗೆಯಲಾರೆನು, ಜೀಯ, ನೆಗೆಯುವ**

**ಮಲ್ಲರಿದ್ದರೆ ಬರಲಿ, ಬರದಿರೆ, ನಾನೆ ಕೈಕೊಂಬೆ!"[೪]**

ಶರಭ ಒಂದು ದಿನ ಗೆಳೆಯ ಕೂಡಿ ಲೀಲೆಗೊಸುಗ ೧೦೦ ಯೋಜನದ ಆಚೆಗೆ ನೆಗೆದಿದ್ದೂ, ಅಲ್ಲಿ ಒಂದು ಹುತ್ತವನ್ನು ತಾಗಲು, ಅದರೊಳಗಿನ ಮುನಿಯ ಕೋಪಕ್ಕೆ ತುತ್ತಾಗಿ ಅವನ ಶಕ್ತಿ ಗುಂದಿದ್ದು ಇಷ್ಟೆಲ್ಲ ವಿವರಗಳನ್ನು ಕವಿ ಯಾವ ಸಂದಿಗ್ದತೆಗೆ ಎಡೆಯಿಲ್ಲದಂತೆ ಸ್ಪುಟವಾಗಿ ಅಡಕವಾಗಿ ಹೇಳಿ ಬಿಡುತ್ತಾರೆ. ಈ ಉಪಕಥೆಯನ್ನು ಲಂಭಿಸಿ ವಿಸ್ತರಿಸುವುದು ಸಾಧ್ಯವಿದ್ದರು ಕವಿ ಹಾಗೆ ಮಾಡಿಲ್ಲ. ಖಂಡಕಾವ್ಯದಲ್ಲಿ ಅದು ಸಾಧ್ಯವಿಲ್ಲ ಏಕೆಂದರೆ ಅಲ್ಲಿ ಪ್ರಧಾನ ಕತೆಯೆ ಮುಖ್ಯ. ವಿಸ್ತಾರವಾದ ಉಪಕಥೆಗೆ ಈ ಪ್ರಕಾರದಲ್ಲಿ ಸ್ಥಳಾವಕಾಶವಿರುವುದಿಲ್ಲ. ಉಪಕಥೆ ಬಂದರು ಅದು ಪ್ರಧಾನಕಥೆಯ ಶರೀರದೊಳಗೆ ಸಮ್ಮಿಳಿತಗೊಳ್ಳಬೇಕು.

ಅಡಕವಾದ ನಿರುಪಣೆಯಂತೆ ವರ್ಣನಾತ್ಮಕತೆ ಈ ಕಾವ್ಯದ ಇನ್ನೊಂದು ವೈಶಿಷ್ಟವಾಗಿದೆ. ಮಾಯಮೃಗವನ್ನು ಕಂಡೊಡನೆ ಜನಕಜೆಯು ತೋರುವ ಪ್ರತಿಕ್ರಿಯೇಯನ್ನು ಕವಿ ವರ್ಣಿಸಿರುವ ಪರಿ ಇದು.

**"$$$ ಜಾನಕಿಯು ಪತಿಯೊಡನೊಂದುದಿನವೆಲೆವನೆಯೊಳಿರುತಿರೆ,**

**ಮುಂದೆ ಮಾಯಾ ಹರಿಣ ಮಿಂಚಿತು ಕುಣಿದು ನಲಿದಾಡಿ:**

**ಮಳೆಯ ಬಿಲ್ಲಿನ ಮರಿಯೊ? ಸುಗ್ಗಿಯ ಹೂವುಗಳ ಬಣ್ಣಗಳ ಮುದ್ದೆಯ**

**ಮುದ್ರಿಸಿದ ಪುತ್ತಳಿಯೊ? ನವ ನವರತ್ನಗಳನಾಯ್ದು**

**ಕರಗಿಸೆರಕವ ಹೊಯ್ದು ಕಡೆದಿಹ ಮಿಗದ ಮೂರ್ತಿಯೊ? ರೂಪುವೆತ್ತಿಹ**

**ಬನದ ಕಬ್ಬವೊ? ಎನಲು ಪೊಮ್ಮರೆ ಸುಳಿದು ಮೋಹಿಸಿತು."[೫]**

ಕಾವ್ಯದ ಆರಂಭದಲ್ಲಿಯೆ ಕಪಿ ವೀರರ ಬಗೆಬಗೆಯ ಚೆಷ್ಠೆಗಳನ್ನು ವರ್ಣಿಸುವ ಭಾಗಗಳು ಹೃದಯಂಗಮವಾಗಿವೆ. ವೀರನಾದ ಹನುಮಂತ ನಭೊಮಾರ್ಗವಾಗಿ ಚಲಿಸುವ ಚಿತ್ರವನ್ನಂತು ಕವಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ.

**"ಕೆಳಗೆತ್ತ? ಮೇಲೆತ್ತ? ಭೂಮಿಯದೆತ್ತ? ದಿಕ್ಕುಗಳೆತ್ತ? ತೋರದೆ**

**ನುಗ್ಗುತಿರಲಾ ಬ್ರಹ್ಮಚಾರಿಯು ದೇಶಬ್ರಹ್ಮದಲಿ,**

**ತಿಳಿವಿನಸಿಯಲಿ ಮಾಯೆಯನು ಕಡಿಕಡಿದು ನುಗ್ಗುವ ಯೋಗಿಯೋ? ಭವ–**

**ಸಾಗರವನುತ್ತರಿಸುತಿರುವ ಮುಮುಕ್ಷು ಸಾಧಕನೋ?**

**ತತ್ತ್ವದಟವಿಯೊಳುಬ್ಬಿ ಚರಿಸುವ ವೇದಾಂತ ಕೇಸರಿಯೊ? ಮುಕ್ತಿಯ**

**ಮುತ್ತುವದ್ವೈತಿಯೋ! ಬೆದರದ ವೀರನಾಸ್ತಿಕನೊ?**

**ಕರ್ಬೊಗೆಯ ಕಾರುವ ಫಿರಂಗಿಯು ಸಿಡಿದ ಗುಂಡೋ, ಜವದ ಮಿಂಚಿನ**

**ಶಕ್ತಿಯೆನೆ ಲಂಘಿಸಿದನಂಬರ ತಳದೊಳಾವೀರ!"[೬]**

ಇಲ್ಲಿ ಕವಿ ವೀರ ಹನುಮಂತನ ವ್ಯಕ್ತಿತ್ವದ ಭೂಮತೆಯನ್ನು ಶಬ್ಧಮಾಲೆ ಮಾಡಿ ಹಾಡಿದ್ದಾರೆ. ಈ ಭೂಮತೆ ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಸರ್ವವ್ಯಾಪಿಯಾಗಿದೆ. ಹೀಗೆ ಕವಿಯ ವರ್ಣನಾ ಚಮತ್ಕಾರವನ್ನು ತೋರವ ಭಾಗಗಳು ಈ ಕಾವ್ಯದಲ್ಲಿ ಇನ್ನೂ ಅನೇಕ ಇವೆ. ಅವುಗಳ ವಿಷದೀಕರಣಕ್ಕೆ ಇದು ಸೂಕ್ತ ಸ್ಥಳವಲ್ಲ.

ಉಪಮಾ ರೂಪಕಗಳು ಶುಭಾಷಿತಗಳು ಇಲ್ಲಿ ವೇಗ್ಗಳವಾಗಿ ಬಂದಿದ್ದು ಅವು ಕಾವ್ಯದ ಸ್ವಾರಸ್ಯವನ್ನು ಹೆಚ್ಚಿಸಿವೆ. ನಾನಾ ಬಗೆಯ ಹರಟೆ ಮತ್ತು ಚೆಷ್ಠೆಗಳಲ್ಲಿ ತೊಡಗಿರುವ ಕಪಿ ವೀರರು ದಳಪತಿಯಾದ ಅಂಗದನ ಆಣತಿಯಂತೆ ಒಂದೆಂಡೆಗೆ ನೆರದ ಪರಿಯನ್ನು

**" ಶೂರವಾಲಿಯ ಸುತನ, ದಳಪತಿಯಂಗದನ ವಾಣಿ**

**ಮೊಳಗಿದದು ಗಂಭೀರನಾದದಿ! ನೆರಪಿದುದು ತನ್ನೆಡೆಗೆ ಚದರಿದ**

**ಸೈನಿಕರ ನಿಮಿಷದಲಿ; ಬಂದರು ಗುಂಪು ಗುಂಪಾಗಿ:**

**ಮಲೆಯನಾಡಿನ ಗಿರಿಯ ಬನದಲಿ ಬೇಟೆಗಾರನ ಕರೆಯನಾಲಿಸೆ**

**ಬಳಿಯ ಹಳ್ಳಿಯ ಬೇಟೆಗಾರರು ನುಗ್ಗಿಬರುವಂತೆ;**

**ಬೆಟ್ಟದಲಿ ಕಡಿದಾದ ಬಂಡೆಯ ಸೆರಗಿನಲಿ ಜೋಲುತಿಹ ಹಲ್ಲೆಗೆ**

**ಕವಿದ ಜೇನ್ನೊಣದಂತೆ, ಬಳಸುತ ಕವಿದು ಕಿಕ್ಕಿರಿದು;**

**ಗಗನ ಚುಂಬಿತ ಸಹ್ಯಪರ್ವತ ಶೃಂಗದೆಡೆ ಬಿರುಗಾಳಿ ಬೀಸಲು,**

**ಮುಂಗಾರ ಕಾರ್ಮುಗಿಲ ಮೊತ್ತವು ಮುತ್ತುವಂದದಲಿ;**

**ಮುತ್ತಿದರು, ಬಳಸಿದರು, ಕವಿದರು, ಕಿಕ್ಕಿರಿದರಂಗದನ ಸುತ್ತಲು"೭**

ಎಂದು ಕವಿ ವರ್ಣಿಸಿದ್ದಾರೆ. ಈ ಉಪಮಾ ಕಪಿ ವೀರರ ಕರ್ತವ್ಯ ಪರತೆಯನ್ನು, ಶ್ರದ್ಧೆಯನ್ನು, ಉತ್ಸಾಹ ಶಕ್ತಿಯನ್ನು ಒಮ್ಮೆಲೆ ನಮ್ಮ ಕಣ್ಮುಂದೆ ತರಿಸುತ್ತದೆ. ಕಾವ್ಯದ ೨ನೇ ಭಾಗದಲ್ಲಿ ಅಗಂದ ಗವಯನನ್ನು ಸಮುದ್ರ ಲಂಘನಕ್ಕೆಂದು ಪ್ರಚೋದಿಸಲು ಆಡಿದ ಮಾತುಗಳಲ್ಲಿ ಬಳಸಿರುವ ಉಪಮಾನಗಳು ಕವಿಯ ಕಾವ್ಯ ಶಕ್ತಿಯ ಹಿರಿಮೆಗೆ ಸಂಕೇತಗಳಾಗಿವೆ.

**"ಕೇಳಿ ಬಲ್ಲೆನು, ಗವಯ, ನೀನು ಮಹಾ ಪರಾಕ್ರಮಶಾಲಿಯೆಂಬುದ–**

**ನಳುಕುವರೆ ಸಂಧಿಸಿದ ಕೀರ್ತಿಯ ಹೊರೆಯ ಹೊರುವುದಕೆ?**

**ಭಕ್ತನಿಗೆ ಜಗ ದೀಶನೊಲ್ಲೆಯು ಭಾರವೇ? ಮುಕ್ತನಿಗೆ ಬಂಧವೆ**

**ಮಾಯೆಯೆಂಬುವ ಲೀಲೆ? ಸಾಹಸ ಹೊರೆಯ ಶಕ್ತನಿಗೆ?**

**ಹೊರೆಯೆ ಬಣ್ಣವು ಮೆರೆವ ಹೂವಿಗೆ? ಕಂಪು ಮಲಯಜಕೇನು ಭಾರವೆ?**

**ಸಮರಲೋಲಗೆ ಮೈದೊಡವು ಮೇಣ್ಸರಸ ಸಾಹಸವು!೮**

ಕಾವ್ಯದ ೩ನೇ ಭಾಗದಲ್ಲಿ ಬರುವ ಒಂದು ಉಪಮೆ ಅಪ್ರತಿಮವಾಗಿದೆ. ವೀರ ಹನುಮಂತ ಮಹೇಂದ್ರಗೀರಿಯನ್ನು ದಾಟಿ ವಾಯುವೇಗದಲ್ಲಿ ಸಮುದ್ರ ಲಂಘನ ಮಾಡುತ್ತಿರುವಾಗ ನಿಶಾಚರಿಯಾದ ಸಿಂಹಿಕೆ ಅವನನ್ನು ತಡೆಯುತ್ತಾಳೆ. ಮಾತ್ರವಲ್ಲ ಅವನನ್ನು ಭೂಮಿಯತ್ತಾ ಸೆಳೆಯುತ್ತಾಳೆ. ಆ ಸೆಳೆತದ ತೀವ್ರತೆಗೆ ಭಯಭೀತನಾದ ಹನುಮಂತ ಆಕಾಶದಿಂದ ಭೂಪಥದತ್ತ ಇಳಿದು ಬರುವ ದೃಶ್ಯವನ್ನು ಈ ಉಪಮೆ ಮನೋಹರವಾಗಿ ಸೆರೆಹಿಡಿದಿದೆ.

**"ಹನುಮನಿಳಿದಿಳಿದಿಳಿದು ಬರುತಿರೆ, ದೂರ ಕೆಳಗಡೆ ಹಿರಿಯ ಬೆಟ್ಟವ**

**ಹೋಲುವ ನಿಶಾಚರಿಯ, ಸಿಂಹಿಕೆಯೆಂಬ ನೆಳಲೆಳೆವ**

**ಘೋರ ನಕ್ತಂಚರಿಯ ಕಂಡನು! ಹೊಸ ನಾಡುಗಳ ಕಂಡುಹಿಡಿಯಲು**

**ಚಲದಿಂದ ಸಂಚರಿಸಿ, ಕಾಣದೆ ನೆಲವನಲೆಯುತ್ತ,**

**ನಡುಗಡಲೊಳೀಸಿ ಬಹ ನೌಕೆಯನಲ್ಲಿ ಬಳಿಯಿಹ ಸೂಚಿಗಲ್ಲಿನ**

**ಪೆರ್ಬೆಟ್ಟವೆಳೆವಂದದಲಿ ಸಿಂಹಿಕೆಯು ಮಾರುತಿಯ**

**ಸೇದಿ ಸೆಳೆದಳು ನೆಳಲನೆಳೆಯುತ, ನಭದಿ ಹಾರುವ ಪಟದ ದಾರವ**

**ಹಿಡಿದು ಭರದಲಿ ಜಗ್ಗಿ ಸೆಳೆವ ಕಿಶೋರನಂದದಲಿ !"೯**

ಈ ಉಪಮೆ ಕುವೆಂಪುರವರ ಕಲ್ಪನಾ ಚಮತ್ಕಾರದ ದ್ಯೋತಕವಾಗಿದೆ. ಇಲ್ಲಿ ಬಳಕೆಯಾಗಿರುವ ಉಪಮೆಗಳು ಮಹೋಪಮೆಗಳ ಭ್ರೂಣ ಸ್ವರೂಪದ ರಚನೆಗಳಂತಿವೆ.'ಶ್ರೀ **ರಾಮಾಯಣ ದರ್ಶನಂ'** ಮಹಾ ಕಾವ್ಯದಲ್ಲಿ ಕುವೆಂಪುರವರು ಬಳಸಿದ ಮಹೋಪಮೆಗಳ ಪೂರ್ವ ಪ್ರಯೋಗಗಳಂತೆ ತೋರುತ್ತವೆ.

ಇಲ್ಲಿ ಬಳಕೆಯಾಗಿರುವ ಛಂದಸ್ಸಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಉಚಿತವೆಂದು ಕಾಣುತ್ತದೆ. ಇದು ಪೂರ್ಣವಾಗಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ ಕಾವ್ಯ ಆದರೆ ಕವಿ ಕಥೆಯಲ್ಲಿನ ಏಕತಾನತೆಯನ್ನು ಮುರಿದು ವೈವಿಧ್ಯತೆಯನ್ನು ತರುವುದಕ್ಕಾಗಿ ಅಲ್ಲಲ್ಲಿ ಘನ ಯೋಜನೆಯಲ್ಲಿ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ.

"ತರುವಾಯ ಮೇ/ಲೆದ್ದು ನಿಂತನು ಕಪಿಗಳಗ್ರಣಿ. ಆತನಾನನ

ದಲ್ಲಿ ತನಿವೀ ರರಸ. ವುಕ್ಕಿತು. ಮಿಂಚು ವಕ್ಷಿಗಳು

ಹೃದಯಾಂತರಾ/ಳದ.ಲ್ಲಡಗಿಹ. ಬಾಳ. ಜೋತಿಯ. ಸೂಚಿ. ಪಂದದಿ

ಮಿಣುಕು.ತಿಹ ತಾ.ರೆಗಳ.ತೆರದಲಿ.ಬೆಳಕ.ಬೀರಿದುವು."[೧೦]

ಇಲ್ಲಿ ೧ ಮತ್ತು ೪ನೆಯ ಪಾದಗಳ ಪ್ರಾರಂಭದ ಎರಡು ಗಣಗಳನ್ನು ೫+೨ಆಗಿಯೋ, ೪+೩ ಆಗಿಯೋ ಒಡೆಯ ಬೇಕಾಗುತ್ತದೆ, ೨+೫ರ ಗಣ ವಿಭಾಗವೂ ಸಾಧ್ಯ. ಕೊನೆಯದೆ ಹೆಚ್ಚು ಸೂಕ್ತವೆಂದು ತೋರುತ್ತದೆ. ಅಲ್ಲದೆ ದ್ವಿತಿಯಾಕ್ಷರ ಪ್ರಾಸವನ್ನು ಕೈಬಿಟ್ಟಿದ್ದಾರೆ ೩+೪,೩+೪ ಮಾತ್ರೆಯ ಭಾಮಿನಿಯ ಲಯವನ್ನು ೫+೫,೪+೪, ಎಂಬಂತೆ ಹಾಗು ೫+೨,೫+೨, ಎಂಬತೆ ಘನ ಯೋಜನೆ ಮಾಡಿಕೊಂಡಿರುವುದು ಉಂಟು. ಹೀಗೆ ಕವಿ ಭಾಮಿನಿ ಛಂದಸ್ಸಿನಲ್ಲಿ ಅನೇಕ ಪ್ರಯೋಗಗಳಿಗೆ ಕೈ ಹಾಕಿದ್ದಾರೆ, "ಭಾಮಿನಿಷಟ್ಪದಿಯ ಸಾಧ್ಯತೆಗಳನ್ನೆಲ್ಲ ಪ್ರಾಸಮುಕ್ತಿ ಹಾಗೂ ಗಣವಿನ್ಯಾಸ ವಿಪರ್ಯಯದ ಮೂಲಕ ಪ್ರಯೋಗಾತ್ಮಕವಾಗಿ ಪೂರೈಸಿ ಅದು ಆಧುನಿಕ ಮಹಾಕಾವ್ಯಕ್ಕೆ ವಾಹಕವಾಗುತ್ತದೆಯೆ ಎಂಬುದನ್ನು ಪರೀಕ್ಷಿಸುವ ಸಲುವಾಗಿ 'ಸಮುದ್ರ ಲಂಘನ'ವನ್ನು ಕುವೆಂಪು ರಚಿಸಿದಂತೆ ಕಾಣುತ್ತದೆ."[೧೧] ದೇ.ಜ.ಗೌರವರ ಈ ಅಭಿಪ್ರಾಯವನ್ನು (ಕ.ವೆಂ.ರಾಜಗೋಪಲ) ಅವರು ಸಮರ್ತಿಸುತ್ತಾರೆ. "ಸಮುದ್ರ ಲಂಘನದ ಛಂದಸ್ಸನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದಾಗ ಅಂದೊಂದು ಪ್ರಯೋಗತ್ಮಾಕವಾದ ಕಾವ್ಯವಾದರು ಛಂದಸ್‌ಶಾಸ್ತ್ರದ ಅನೇಕ ಸೂತ್ರಗಳು ಅದರ ಗರ್ಭದಲ್ಲಿ ಹುದುಗಿದೆ ಎಂದು ತಿಳಿಯಲು ಅವಕಾಶವಿದೆ. "ಭಾಮಿನಿಷಟ್ಪದಿಯ ಓಟವನ್ನು ಲೀಲಾಜಾಲವಾಗಿ ಸೂರೆಗೊಂಡ ರೀತಿಯಲ್ಲಿ 'ಓಟ'ವಿದೆ. ಎಂಥ ಈ ವರ್ಣನೆಗೂ ಓಟ ಸಾಗುತ್ತದೆ, ಕುಂಟುವುದಿಲ್ಲ..... ಎಲ್ಲಿಯೂ ಭಾಷೆಯ ಕ್ಲಿಷ್ಟತೆಯಾಗಲೀ'ಅಪರಿಚಿತತೆ'ಯಾಗಲಿ ಕಂಡುಬರುವುದಿಲ್ಲ. ಹಾಗೆ ಮನ ಮುಟ್ಟುವ ಶೈಲಿಯಾಗುತ್ತದೆ."[೧೨] ಈ ಕಾವ್ಯ ಕವಿಯ ಸೃಜನಶೀಲ ಪ್ರತಿಭೆಯ ಪ್ರಯೋಗ ಶಾಲೆಯಾಗಿದೆ. ಮಹಾಕಾವ್ಯ ರಚನೆ ಪೂರ್ವ ಸಿದ್ಧತೆಯಲ್ಲಿ ತೊಡಗಿರುವ ಕವಿ ಕುವೆಂಪುರವರ ಕಾವ್ಯ ಪ್ರಯೋಗದ ರಂಗಮಂಚ. ಸಮುದ್ರ ಲಂಘನದ ವಸ್ತು, ಅಭಿವ್ಯಕ್ತಿ, ಪಾತ್ರಚಿತ್ರಣ, ಭಾಷೆ, ಛಂದಸ್ಸು, ಶೈಲಿ ಈ ವಿಷಯಗಳಲ್ಲಿಯು ಸಮುದ್ರ ಲಂಘನ, **ಶ್ರೀ ರಾಮಾಯಣ ದರ್ಶನಂ** ಮಹಾಕಾವ್ಯದ ಪೂರ್ವ ಪ್ರಯೋಗವಾಗಿರುವುದು ಸರಿಯಷ್ಟೆ 'ಸಮುದ್ರ ಲಂಘನ' ಎಂಬ ಕಿರುಕಾವ್ಯವನ್ನು ತಾವು ರಚಿಸಿದ್ದುದಾಗಿಯು ೧೯೩೦ರ ಸಮಯದ ಅರ್ಥಸಾಧಕ ಪತ್ರಿಕೆಯಲ್ಲಿ ಅದು ಅಚ್ಚಾಗಿದ್ದುದಾಗಿಯು ತಿಳಿಸಿ, ಆ ಪತ್ರಿಕೆ ಸಿಗುವುದಾದರೆ ಅಂದು ರಚಿಸಿದ ಕಿರುಕಾವ್ಯ ತಮ್ಮ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ರಚನೆಗೆ ಹೇಗೆ ನಾಂದಿಯಾಗಿತ್ತೆಂಬ ಸಂಗತಿಯನ್ನು ಕಾಣಬಹುದೆಂದು ಕುವೆಂಪು ಅವರು ಹತ್ತು–ಹನ್ನೆರಡು ವರ್ಷಗಳಿಂದ ಹೇಳುತ್ತಿದ್ದರು"[೧೩] (ದೇ.ಜ.ಗೌ. ಕುವೆಂಪು ಕೃತಿ ವಿಮರ್ಶೆ ಪುಟ–೨೯೪)

ದೇ.ಜ.ಗೌರವರ ಈ ಉಲ್ಲೇಖ ನಮ್ಮ ಮೇಲಿನ ವಾದಕ್ಕೆ ಇನ್ನಷ್ಟು ಇಂಬುಕೊಡುತ್ತದೆ. **ಸಮುದ್ರ ಲಂಘನ** ಮತ್ತು **ಶ್ರೀ ರಾಮಾಯಣ ದರ್ಶನಂ** ಮಹಾಕಾವ್ಯದ ಕಿಷ್ಕಿಂದಾ ಸಂಪುಟದಲ್ಲಿ ಬರುವ **"ಇರ್ದುದಾ ಮಹೇಂದ್ರಾಚಲಂ"** ಮತ್ತು **"ಸಾಗರೋಲ್ಲಂಘನಂ"** ಎಂಬ ಎರಡು ಸಂಚಿಕೆಗಳಿದ್ದು ಇವರೆಡರಲ್ಲು ನಿರವಿಸಿರುವ ವಸ್ತು ಒಂದೆ ಆಗಿದೆ ಆದರೆ ಭವ್ಯತಾನುಭವದ ಅನುಭೂತಿಯಲ್ಲಾಗಲಿ, ಪಾತ್ರಚಿತ್ರಣದಲ್ಲಾಗಲಿ, ದರ್ಶನ ದೃಷ್ಟಿಯಲ್ಲಾಗಲಿ ಕಥೆ ಉಪಕಥೆಗಳ ರಸನಿರ್ಭರವಾದ ನಿರೂಪಣೆಯಲ್ಲಾಗಲಿ ಸಮುದ್ರ ಲಂಘನ ಖಂಡಕಾವ್ಯವು ಸಾಗರೋಲ್ಲಂಘನ ಕಾವ್ಯ ಭಾಗಕ್ಕೆ ಸಮ ಸ್ಪರ್ಧಿ ಆಗಲಾರದು. ಆದರೆ 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ'ದ 'ಸಾಗರೋಲ್ಲಂಘನಂ' ಭಾಗದ ಹಾಗೂ 'ಸಮುದ್ರಲಂಘನ'ದ ವಸ್ತುವಿನ ಹೊರಮಯಲ್ಲಿ ಹೋಲಿಕೆಯಿದ್ದರು ಅವೆರಡು ಪ್ರತ್ಯೇಕ, ಸ್ವತಂತ್ರವೆಂಬ ಭಾವನೆಗೆಡೆಗೊಡುವಷ್ಟರಮಟ್ಟಿನ ಕ್ರಾಂತಿಕಾರಕ ಮಾರ್ಪಾಡುಗಳು ಮೊದಲನೆಯದರ ಒಳಮಯಲ್ಲಿ ಗೋಚರಿಸುತ್ತವೆಂಬುದು ಸಕೃತ್‌ದೃಷ್ಟಿಗು ವೇದ್ಯವಾಗುತ್ತದೆ."[೧೩] ಎನ್ನುವ ಮಾತುಗಳು ಒಪ್ಪತಕ್ಕದಾಗಿವೆ. ಘಟನೆಗಳ ಸ್ವರೂಪದಲ್ಲಿಯು ಕಥಾನುಪೂರ್ವಿಯ ನಿರ್ವಾಹದಲ್ಲಿಯು ಎರಡೂ ಕಾವ್ಯಗಳಲ್ಲಿ ವ್ಯತ್ಯಾಸಗಳಿವೆ.

ಉದಾಹರಣೆಗೆ :– ಸಮುದ್ರ ಲಂಘನದಲ್ಲಿ ಮುದ್ರೆಯ ಉಂಗುರವನ್ನು ಹನುಮಂತನ ಕೈಗೆ ಕೊಡುವವನು ಅಂಗದನಾದರೆ ಸಾಗರೋಲ್ಲಂಘನ ಭಾಗದಲ್ಲಿ ಶ್ರೀ ರಾಮನೆ ನೇರವಾಗಿ ಅದನ್ನು ಹನುಮಂತನಿಗೆ ಕೊಡುತ್ತಾನೆ. ಸಂಪಾತಿಯು ನಿಶಕರಮುನಿಯ ಶಾಪಕ್ಕೆ ತುತ್ತಾಗುವ ಉಪಕತೆ ಸಾಗರೋಲ್ಲಂಘನ ಭಾಗದಲ್ಲಿ ವಿಸ್ತಾರವಾಗಿ ಬರುತ್ತದೆ. ಆದರೆ ಸಮುದ್ರ ಲಂಘನದಲ್ಲಿ ಇದರ ಉಲ್ಲೇಖವೆ ಇಲ್ಲ. ಸುರಶೀಯ ಶಾಪಮುಕ್ತಿಯ ಪ್ರಸಂಗ, ಮೈನಾಕನನ್ನು ಕೆಳೆವಾತಿನಿಂದ ಮನ್ನಿಸುವ ಪ್ರಸಂಗ, ಇಂದ್ರಜಿತು ಹನುಮಂತನಿಗೆ ವಾಯುಮಾರ್ಗದಲ್ಲಿ ತಡೆ ಒಡ್ಡಿದ ಪ್ರಸಂಗ ಈ ರೀತಿಯ ಉಪಕತೆಗಳು ಸಮುದ್ರ ಲಂಘನದಲ್ಲಿ ಸ್ಥಳ ಪಡೆದಿಲ್ಲ.

ಕಥಾನುಪೂರ್ವಿಯ ನಿರ್ವಹಣ ಕ್ರಮದಲ್ಲು ವ್ಯತ್ಯಾಸಗಳಿವೆ. ಸಮುದ್ರ ಲಂಘನದಲ್ಲಿಯಾದರೆ ಅಂಗದ, ಗವಯ, ಶರಭ, ಜಾಂಬವಂತ ಈ ಕ್ರಮದಲ್ಲಿ ಒಬ್ಬರ ನಂತರ ಒಬ್ಬರು ತಮ್ಮ ಸಾಮರ್ಥ್ಯದ ಬಗ್ಗೆ ಭಾಷಣ ಮಾಡುತ್ತಾರೆ. ಆದರೆ 'ಸಾಗರೋಲ್ಲಂಘನಂ' ದಲ್ಲಿ ಗಜ, ಗವಯ, ಗಂಧಮಾಧನ, ಮೈಹಿಂದ, ಜಾಂಬವಂತ, ಮೊದಲಾದ ಕಪಿ ವೀರರೆಲ್ಲಾ ಕ್ರಮವಾಗಿ ಮಾತನಾಡುತ್ತಾರೆ. ಈ ಎರಡು ಕಾವ್ಯಗಳಲ್ಲು ಕಪಿ ವೀರರು ಆಡಿದ ಮಾತುಗಳಲ್ಲಿ ಏಕರೂಪತೆ ಇಲ್ಲ. ಆಯಾ ಕಾವ್ಯದ ಪರಿಸರ ಮತ್ತು ಕಥಾ ಸನ್ನಿವೇಶಕ್ಕೆ ಅನುರೂಪವಾಗುವಂತೆ ಸಂಭಾಷಣೆಗಳು ಮೂಡಿ ಬಂದಿವೆ.

ಖಂಡಕಾವ್ಯ ಒಂದು ಕಿರು ಕಾವ್ಯ ಪ್ರಕಾರ. ಅದರ ಆವರಣ ಮಹಾಕಾವ್ಯಕ್ಕೆ ಹೋಲಿಸಿದರೆ ತೀರ ಚಿಕ್ಕದು. ಪಾತ್ರಚಿತ್ರಣ, ವರ್ಣನವಿಸ್ತಾರ ಮಹಾಕಾವ್ಯದಲ್ಲಿರುವಂತೆ ವ್ಯಾಪಕವಾಗಿ ತರಲು ಅವಕಾಶವಿರುವುದಿಲ್ಲ ಎಂಬುದನ್ನು ಗಮನದಲ್ಲಿ ಇರಿಸಿಕೊಂಡು ನೋಡಿದರೆ ಸಮುದ್ರಲಂಘನ ಒಂದು ಪ್ರತ್ಯೇಕವಾದ ಸ್ವಯಂ ಪೂರ್ಣವಾದ ಪ್ರಯೋಗಶೀಲ ಸೃಷ್ಟಿ ಎಂಬುದು ಮನದಟ್ಟಾಗುತ್ತದೆ." 'ಸಮುದ್ರ ಲಂಘನ' ಮತ್ತು 'ಸಾಗರೋಲ್ಲಂಘನ'ಗಳ ರಚನೆಯ ಕಾಲದಲ್ಲಿ ಸುಮಾರು ಹದಿನೈದು ವರ್ಷಗಳ ಅಂತರವಿದೆ. ಅವರೆಡರ ನಡುವೆ ಸ್ಪಷ್ಟವಾಗಿ ಮೈದೋರುವ ಕಲ್ಪನಾ ಪ್ರತಿಭೆ ಹಾಗು ಶೈಲಿಯ ಭವ್ಯತೆಗೆ ಈ ಕಾಲದ ಅಂತರ ಕಾರಣವಾಗಿದೆಯಲ್ಲದೆ ಕುವೆಂಪು ಅವರ ಕಾವ್ಯ ಜೀವನದ ವಿಕಾಸವನ್ನು ಸುಲಭವಾಗಿ ಗುರುತಿಸಬಹುದು"[೧೪]

ಹೀಗಾಗಿ ಸಮುದ್ರ ಲಂಘನ ಕುವೆಂಪು ಅವರ ಕಾವ್ಯ ಜೀವನ ವಿಕಾಸದ ಮೊದಲ ಘಟ್ಟವನ್ನು ಪ್ರತಿನಿಧಿಸಿದರೆ, 'ಶ್ರೀ ರಾಮಾಯಣ ದರ್ಶನಂ' ಅಂತಿಮ ಘಟ್ಟವನ್ನು ಪ್ರತಿನಿಧಿಸುತ್ತದೆ.

**ಪರಾಮರ್ಶನ ಗ್ರಂಥಗಳು**


೧ ಸಂ, ಕೆ, ಸಿ, ಶಿವಾರೆಡ್ಡಿ–ಕುವೆಂಪು ಸಮಗ್ರ ಕಾವ್ಯ, ಪುಟ – ೮೨೦

೨ ಅದೇ ಪುಟ – ೮೨೪

೩ ಅದೇ ಪುಟ – ೮೨೪

೪ ಅದೇ ಪುಟ – ೮೨೫

೫ ಅದೇ ಪುಟ – ೮೨೩

೬ ಅದೇ ಪುಟ – ೮೩೧

೭ ಅದೇ ಪುಟ – ೮೧೮

೮ ಅದೇ ಪುಟ – ೮೨೪

೯ ಅದೇ ಪುಟ – ೮೩೧

೧೦ ಅದೇ ಪುಟ – ೮೧೮

೧೧ ದೇ.ಜ.ಗೌ. ಕುವೆಂಪು ಕೃತಿ ವಿಮರ್ಶೆ ಪುಟ–೩೦೬

೧೨ ಕ.ವೆಂ. ರಾಜಗೋಪಾಲ ಅಂಕಣ ,ಸಂಪುಟ ೧,ಸಂಚಿಕೆ ೫, ಪುಟ.೨೭.

೧೩ ದೇ.ಜ.ಗೌ. ಕುವೆಂಪು ಕೃತಿ ವಿಮರ್ಶೆ ಪುಟ – ೨೯೭

೧೪ ಅದೇ ಪುಟ – ೨೯೫ (೨೫)